ಇ) ಇದರಲ್ಲಿ 155 ಫಲಾನುಭವಿಗಳು ಜಯಮಹಲ್ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದವರಾಗಿರುತ್ತಾರೆ.

ಈ) ಇಲ್ಲ. ನಿಗಮದ ಸ್ವಾವಲಂಬನಾ ಸಾಲದ ನೀತಿ ಮತ್ತು ನಿಯಮಾವಳಿ ಪ್ರಕಾರ ಫಲಾನುಭವಿಗಳು ಯಾರು ಅರ್ಜಿ ಸಲ್ಲಿಸಿರುವರೊ ಅಂತಹ ಫಲಾನುಭವಿಗಳಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿಯು ಪರಿಶೀಲಿಸಿ ಶಿಫಾರಸ್ಸಿನೊಂದಿಗೆ ಫಲಾನುಭವಿಗಳು ನಮೂದಿಸಿರುವ ಬ್ಯಾಂಕುಗಳಿಗೆ ಕಳುಹಿಸಲಾಗುತ್ತದೆ. ಈ ವಿಧಾನವು ಬೆಂಗಳೂರು ಜಿಲ್ಲೆಗೂ ಅನ್ವಯಿಸುತ್ತದೆ.

ಉ) ಸ್ವಾವಲಂಬನ ಸಾಲ ನೀತಿ ಮತ್ತು ನಿಯಮಾವಳಿ ಪ್ರಕಾರ ಮತೀಯ ಅಲ್ಪಸಂಖ್ಯಾತರ ಯಾರು ಸಾಲಕ್ಕಾಗಿ ಅರ್ಜಿ ಸಲ್ಲಿಸುವರೋ ಅಂತಹ ಎಲ್ಲಾ ಅರ್ಜಿಗಳನ್ನು ಮೇಲ್ಕಂಡ ಜಿಲ್ಲಾ ಸಮಿತಿಯು ಪರಿಗಣಿಸಿ ಯಾವುದೇ ಕ್ಷೇತ್ರದ ಭೇದವಿಲ್ಲದೆ ಸಾಲ ಸೌಲಭ್ಯದ ನೆರವನ್ನು ಕಲ್ಪಿಸಲು ತನ್ನ ಶಿಫಾರಸ್ಸಿನೊಂದಿಗೆ ಬ್ಯಾಂಕಿಗೆ ಕಳುಹಿಸಲಾಗುತ್ತದೆ.

ಹೊಸ ಉದ್ಯಮಿಗಳು ಬಂಡವಾಳ ತೊಡಗಿಸಿರುವ ಬಗ್ಗೆ

445. - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಮುಖ್ಯ ಖನಿಜಗಳಾದ ಕಬ್ಬಿಣ ಮತ್ತು ಚಿನ್ನದ ಕ್ಷೇತ್ರಗಳಲ್ಲಿ ಹೊಸದಾಗಿ ಎಷ್ಟು ಉದ್ಯಮಿಗಳ ಬಂಡವಾಳ ತೊಡಗಿಸಿದ್ದಾರೆ?

ಆ) ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ಪರತ್ತುಗಳೊಂದಿಗೆ ಇವರು ಕಾರ್ಯೋನ್ಮುಖರಾಗಿದ್ದಾರೆ? ವಿವರ ನೀಡುವುದು.

ಎಸ್.ಡಿ. ಜಯರಾಂ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) 17 ವ್ಯಕ್ತಿಗಳು : ಕಂಪನಿಗಳು ಹೊಸದಾಗಿ ಚಿನ್ನದ ಗಣಿ ಅನ್ವೇಷಣಾ ಲೈಸನ್ಸ್‌ಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ಕಬ್ಬಿಣ ಅದಿರಿಗೆ ಸಂಬಂಧಿಸಿದಂತೆ 3 ಅರ್ಜಿಗಳು ಸ್ವೀಕೃತವಾಗಿವೆ.

ಆ) ಚಿನ್ನ ಹಾಗೂ ಕಬ್ಬಿಣದ ಅದಿರು ಹೆಚ್ಚಿರುವ ರಾಜ್ಯದ ಬಹುಪಾಲು ಪ್ರದೇಶಗಳು ಈ ಅರ್ಜಿಗಳಲ್ಲಿ ಒಳಗೊಂಡಿವೆ. ಈ ಎರಡೂ ಖನಿಜಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನೀತಿಯನ್ನು ರೂಪಿಸುತ್ತಿದೆಯಲ್ಲದೆ ಸಂಬಂಧಿತ ನಿಯಮವಾದ ಖನಿಜ ರಿಯಾಯಿತಿ ನಿಯಮಗಳು 1960ರ ಕೆಲವು ಪ್ರಸ್ತುತ ನಿಯಮಗಳನ್ನು ಸಡಿಲಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ತೀರ್ಮಾನಕ್ಕಾಗಿ ಕಾಯಲಾಗುತ್ತಿದೆ. ಆದ್ದರಿಂದ ಅರ್ಜಿದಾರರು ಗಣಿಗಾರಿಕೆ ಕೆಲಸವನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ.

ಅಧ್ಯಕ್ಷರು : ದಿನಾಂಕ 20-2-96ರಂದು ಪ್ರಶ್ನೋತ್ತರ ನಡೆಯದ ಕಾರಣ 1ನೇ ಪಟ್ಟಿಯಲ್ಲಿದ್ದ 15 ಚುಕ್ಕೆ ಗುರುತಿನ ಪ್ರಶ್ನೆಗಳ ಪೈಕಿ 8 ಪ್ರಶ್ನೆಗಳಿಗೆ ಉತ್ತರಗಳನ್ನು 24 ಚುಕ್ಕೆ ರಹಿತ ಪ್ರಶ್ನೆಗಳ 11 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯಲ್ಲಿ ಮಂಡಿಸುತ್ತೇನೆ.

ರಾಜ್ಯದಲ್ಲಿ ಕೈಗೊಂಡ ಏತ ನೀರಾವರಿ ಕಾಮಗಾರಿಗಳು

83 - ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) :ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ಏತ ನೀರಾವರಿ ಕಾಮಗಾರಿಗಳನ್ನು ಸರ್ಕಾರದವರು ಪ್ರಾರಂಭಿಸಿದ್ದಾರೆ ಹಾಗೂ ಅವು ಈಗ ಯಾವ ಹಂತದಲ್ಲಿ ಇರುವುವು (ಜಿಲ್ಲಾವಾರು ವಿವರ ನೀಡುವುದು)*

ಆ) *ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳದಿದ್ದಲ್ಲಿ 1993-97ನೇ ಸಾಲಿನಲ್ಲಿ ಯಾದಾದರೂ ಹೊಸ ಏತ ನೀರಾವರಿ ಯೋಜನೆ ಪ್ರಾರಂಭಿಸುವ ವಿಚಾರ ಸರ್ಕಾರದವರಲ್ಲಿದೆಯೇ?*

ಇ) *ನೀರಾವರಿಯಿಂದ ವಂಚಿತರಾದ ವಿಜಾಪುರ ಜಿಲ್ಲೆಗೆ ಹೆಚ್ಚಿನ ಆದ್ಯತೆ ಕೊಡುವುದಕ್ಕೆ ಸರ್ಕಾರದವರು ಪರಿಶೀಲಿಸುವರೆ?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿ): ಅ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು 13 ಏತ ನೀರಾವರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಅವುಗಳ ಹಂತದ ಬಗ್ಗೆ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಹೌದು.

ವಿಧಾನ ಸಭಾ ಸದಸ್ಯರಾದ ಶ್ರೀ ಜಿ.ಟಿ. ಪಾಟೀಲ್‌ರವರ ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 83ಕ್ಕೆ ಅನುದಾನ

95-96ನೇ ಸಾಲಿನಲ್ಲಿ ರಾಜ್ಯದಲ್ಲಿ ಪ್ರಾರಂಭಿಸಿರುವ ಹೊಸ ಏತ ನೀರಾವರಿ ಯೋಜನೆಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆ	ಏತ ನೀರಾವರಿ ಕಾಮಗಾರಿಗಳ ಹೆಸರು	ಹಂತ
(ಅ)	ಸಣ್ಣ ನೀರಾವರಿ ದಕ್ಷಿಣ ವಲಯ		
	ಶಿವಮೊಗ್ಗ ಜಿಲ್ಲೆ :		
		1. ಮೂಗೂರು ಬಳಿ ವರದಾನದಿಯಿಂದ ಏತ ನೀರಾವರಿ ಯೋಜನೆ	ಅಂದಾಜು ಮಂಜೂರಾಗಿದ್ದು ವಿನ್ಯಾಸಗಳನ್ನು ಅಂತಿಮಗೊಳಿಸಲಾಗುತ್ತಿದೆ.
		2. ಮೂಡಿ ಬಳಿ ವರದಾ ನದಿಗೆ ಏತ ನೀರಾವರಿ ಯೋಜನೆ.	-ಯಥಾ-
		3. ಕಾಗೋಡು ಬಳಿ ಬಾಂದಾರ ಮತ್ತು ಏತನೀರಾವರಿ ಯೋಜನೆ	ಜಾಕ್‌ವೆಲ್‌ಗೆ ಮಣ್ಣು ಅಗತದ ಕೆಲಸ ಮುಗಿದಿದೆ. ನೀರೆತ್ತುವ ಯಂತ್ರಗಳ ಗುತ್ತಿಗೆಗಳನ್ನು ಅಂತಿಮಗೊಳಿಸಲಾಗುತ್ತಿದೆ.
		4. ತಲಗಡಲೆ ಬಳಿ ಬಾಂದಾರ ಮತ್ತು ಏತ ನೀರಾವರಿ ಯೋಜನೆ	ಜಾಕ್‌ವೆಲ್‌ಗೆ ಮಣ್ಣು ಅಗೆತದ ಕೆಲಸ ಮುಗಿದಿದೆ. ನೀರೆತ್ತುವ ಯಂತ್ರಗಳಿಗಾಗಿ ಗುತ್ತಿಗೆಗಳನ್ನು ಕರೆಯಬೇಕಾಗಿದೆ.
	ಮಂಡ್ಯ ಜಿಲ್ಲೆ	5. ಹೆಮ್ಮಿಗೆ ಬಳಿ ಏತನೀರಾವರಿ ಯೋಜನೆ.	ಜಾಕ್‌ವೆಲ್‌ಗೆ ಮಣ್ಣು ಅಗೆತದ ಕೆಲಸ ಮುಗಿದಿದೆ. ಉಳಿದ ಕೆಲಸಗಳನ್ನು ಗುತ್ತಿಗೆ ಮೂಲಕ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

(ಅ) ಸಣ್ಣ ನೀರಾವರಿ ಉತ್ತರ ವಲಯ

ರಾಯಚೂರು ಜಿಲ್ಲೆ

6.	ದೇವದುರ್ಗ ತಾಲ್ಲೂಕು ನಿಲುವಂಜಿ ಬಳಿ ಏತನೀರಾವರಿ ಯೋಜನೆ.	ಜಾಕ್‌ವೆಲ್ ಆಗತ ಭಾಗಶಃ ರೈಸಿಂಗ್ ಮೈನ್‌ನ ಕೊಳವೆಗಳು ಸರಬರಾಜಾಗಿದದು, ಇದಕ್ಕಾಗಿ ಆಗತ ಪ್ರಾರಂಭಿಸಲಾಗಿದೆ.
7.	ಮಾನ್ವಿ ತಾ:ಗೋರ್ಕಲ್ ಏತ ನೀರಾವರಿ ಯೋಜನೆ.	ಇನ್‌ಟೇಕ್‌ವೆಲ್ ನಿರ್ಮಾಣ ಇನಟೇಕ್ ಕೊಳವೆ ಜೋಡಣೆ, ಜೇಂಬರಿನ ಮಣ್ಣಿನ ಆಗತಹಾಗೂ ಪೂರಕ ಕಾಲುವೆ ಕೆಲಸ ಮುಗಿದಿದೆ. ಜಾಕ್‌ವೆಲ್ ಕೆಲಸ ಭೂಮಟ್ಟದವರೆಗೆ ಮುಗಿದಿದೆ. ರೈಸಿಂಗ್ ಮೈನ್‌ನ ಕೊಳವೆಗಳ ಸರಬರಾಜಿಗೆ.
8.	ಮಾನ್ವಿ ತಾ:ಮೋತ್ಕಾಳ ಬಳಿ ಏತ ನೀರಾವರಿ ಯೋಜನೆ.	ಜಾಕ್‌ವೆಲ್, ಇನ್‌ಟೇಕ್ ಕೊಳವೆ, ಜಾಕ್‌ವೆಲ್‌ಗಾಗಿ ಮಣ್ಣಿನ ಆಗತದ ಕೆಲಸ ಪ್ರಾರಂಭಿಸಲಾಗಿದ್ದು, 8 ಅಡಿ ಆಳದ ವರೆಗೆ ಇಳಿಸಲಾಗಿದೆ. ನೀರೆತ್ತುವ ಯಂತ್ರದ ಮನೆಯ ಪಾಯದ ಕೆಲಸ ಮುಗಿದಿದೆ.
9.	ಸಿಂಧನೂರು ತಾ: ಹೂಡಾ ಏತ ನೀರಾವರಿ ಯೋಜನೆ	ಗುತ್ತಿಗೆ ಕರೆಯಲಾಗಿದೆ. ಅನುಮೋದನೆಯಾಗಿದ್ದು, ಕೆಲಸ ಪ್ರಾರಂಭಿಸಲಾಗಿದೆ.

(ಆ) ಜಿಲ್ಲಾ ಪಂಚಾಯತ್ ತಾಂತ್ರಿಕ ವಿಭಾಗ

ಬಳ್ಳಾರಿ ಜಿಲ್ಲೆ

11.	ಸಿರಗುಪ್ಪ ತಾಲ್ಲೂಕು ಟಿ. ರಾಂಪುರ ಏತ ನೀರಾವರಿ ಯೋಜನೆ.	ಜಾಕ್‌ವೆಲ್ ಕೆಲಸಕ್ಕಾಗಿ ಪಾಯದ ಆಗತದ ಕಾಮಗಾರಿ ಪ್ರಗತಿಯಲ್ಲಿದೆ.
12.	ಹೊಸಪೇಟೆ ತಾ:ಚೌಕು ಏತ ನೀರಾವರಿ ಯೋಜನೆ.	ಇಲ್ಲಿಯವರೆಗೆ 1..2 ಲಕ್ಷರೂ.ಗಳು ಖರ್ಚಾಗಿದ್ದು, ಕೆಲಸ ಪ್ರಗತಿಯಲ್ಲಿದೆ.
13.	ಹೊಸಪೇಟೆ ತಾ:ಉಪ್ಪಾರಹಳ್ಳಿ ಏತ ನೀರಾವರಿ ಯೋಜನೆ.	ಇಲ್ಲಿಯವರೆಗೆ 8.12ಲಕ್ಷ ರೂ.ಗಳು ಖರ್ಚಾಗಿದ್ದು, ಕೆಲಸ ಪ್ರಗತಿಯಲ್ಲಿದೆ.

ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ನೇಮಕಾತಿ

146 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶ್ವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ನೇಮಕಕ್ಕೆ ಸರ್ಕಾರ ಉಪಯೋಗಿಸುವ ಮಾನ ದಂಡವೇನು?

ಆ) ಗರಿಷ್ಠ ಅಂಕಗಳ ಆಧಾರದ ಮೇಲೆ ನೇರ ನೇಮಕಾತಿ ಮಾಡಿದರೆ 8-10 ವರ್ಷಗಳ ಹಿಂದಿನ ನಿರುದ್ಯೋಗಿ ಅಭ್ಯರ್ಥಿಗಳಿಗೆ ಅನ್ಯಾಯವಾಗುವುದಿಲ್ಲವೆ?

ಇ) ಈ ಗೊಂದಲ ನಿವಾರಣೆಗೆ ನೇರ ಆಯ್ಕೆಯ ಬದಲಿಗೆ ಅರ್ಹತಾ ಪರೀಕ್ಷೆ ಅಥವಾ ಸಂದರ್ಶನ ಏನಾದರು ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ?